**ದಿನಾಂಕಃ 10.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಬಿ.ಎ.ಎಸ್ ಅವರಿಂದ–**

1. ನಾನು ಪದವಿಧರ. 2015–16 ರಲ್ಲಿ ಪದವಿ ಮುಗಿಸಿರುತ್ತೇನೆ. ನನ್ನ ತಂದೆಗೆ 64–65 ವರ್ಷ ವಯಸ್ಸು. ನನ್ನ ಅಜ್ಜಿಗೆ 90 ವರ್ಷ ಮೇಲ್ಪಟ್ಟು ವಯಸ್ಸಾಗಿದೆ. ನನ್ನ ಅಜ್ಜಿಗೆ 90 ವರ್ಷ ಮೇಲ್ಪಟ್ಟು ವಯಸ್ಸಾಗಿದೆ ಎಂದು ತೋರಿಸಲು ಆಧಾರ್ ಕಾರ್ಡ್‌ನ ಹಾಜರುಪಡಿಸುತ್ತೇನೆ ನನ್ನ ಅಜ್ಜಿಗೆ 70 ವರ್ಷ ವಯಸ್ಸಾಗಿದೆ ಎಂದರೆ ಸರಿಯಲ್ಲ. ಆಧಾರ್ ಕಾರ್ಡ್‌ನ ಪ್ರಕಾರ ಅವರಿಗೆ 90 ವರ್ಷ ವಯಸ್ಸಾಗಿದೆ. ನನ್ನ ತಂದೆ 1 ನೇ ಪ್ರತಿವಾದಿಗೆ 53 ವರ್ಷ ವಯಸ್ಸಾಗಿದೆ ಎಂದರೆ ಸುಳ್ಳು.

2. ನನಗೆ 1,2 ನೇ ಪ್ರತಿವಾದಿಗಳು 9 ನೇ ತಿಂಗಳು 2023 ರಲ್ಲಿ ಮುಕ್ತಿಯಾರ್ ಪತ್ರ ಬರೆದುಕೊಟ್ಟಿದ್ದು, ದಿನಾಂಕ ನೆನಪಿಲ್ಲ. ಸದರಿ ಮುಕ್ತಿಯಾರ್ ಪತ್ರವನ್ನು ನೋಟರಿಯವರ ಕಚೇರಿಯಲ್ಲಿ ಬರೆದಿದ್ದು, ಸದರಿ ನೋಟರಿಯವರ ಹೆಸರು ನನಗೆ ಗೊತ್ತಿಲ್ಲ. ಸದರಿ ಮುಕ್ತಿಯಾರ್ ಪತ್ರಕ್ಕೆ ನಮ್ಮ ಊರಿನ ಸ್ವಾಮಿ ಹಾಗೂ ಚೇತನ್ ಅವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. 1,2 ನೇ ಪ್ರತಿವಾದಿಗಳಿಗೆ ಹುಷಾರಿಲ್ಲ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. 1,2 ನೇ ಪ್ರತಿವಾದಿಗಳಾದ ನನ್ನ ಅಜ್ಜಿ ಹಾಗೂ ನನ್ನ ತಂದೆ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. 1,2 ನೇ ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದರೆ ಸತ್ಯಾಂಶ ಹೊರಗೆ ಬೀಳುತ್ತದೆ ಎಂದು ನಾನು ಜಿಪಿಎ ಬರೆಯಿಸಿಕೊಂಡು ಸಾಕ್ಷಿ ನುತಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಂದೆ ವ್ಯವಸಾಯ ಮಾಡಿಕೊಂಡು ಮನೆ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಕಳೆದ 5 ವರ್ಷಗಳಿಂದ ಮನೆ ವ್ಯವಹಾರ ನಾನೇ ನೋಡಿಕೊಳ್ಳುತ್ತಿದ್ದೇನೆ. ಈ ವಿಚಾರವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ. ಕೇವಲ ಅವರಿಗೆ ಆರೋಗ್ಯ ಚೆನ್ನಾಗಿಲ್ಲ ಎಂದು ಬರೆಯಿಸಿರುತ್ತೇನೆ.

4. ನನಗೆ ಈಗ 27 ವರ್ಷ ವಯಸ್ಸು. ನಾನು ಹುಟ್ಟುವ ಮೊದಲು ನನ್ನ ಕುಟುಂಬದಲ್ಲಿ ಏನೇನೂ ಆಗಿರುತ್ತದೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಆದರೆ ನನ್ನ

ಅಜ್ಜಿ ಹಾಗೂ ತಂದೆಯವರಿಂದ ವಿಚಾರ ತಿಳಿದುಕೊಂಡಿದ್ದೇನೆ. ನಮ್ಮ ಕುಟುಂಬದ ಆಸ್ತಿ ವಿವರಗಳು 1,2 ಹಾಗೂ 11 ಪ್ರತಿವಾದಿಗಳಿಗೆ ಚೆನ್ನಾಗಿ ವಿವರಣೆ ಗೊತ್ತು ಎಂದರೆ ಸರಿ. ನಾನು ನನ್ನ ಅಜ್ಜಿ ಹಾಗೂ ನನ್ನ ತಂದೆ ಅವರ ಪರ ಸಾಕ್ಷಿ ನುಡಿಯುತ್ತಿದ್ದೇನೆ.

5. ಪ್ರಸ್ತುತ ದಾವೆಯನ್ನು ವಾದಿಗಳು ವಿಭಾಗದ ವಿಚಾರವಾಗಿ ಸಲ್ಲಿಸಿರುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ವಾದಿಗಳು ½ ಭಾಗ ಕೇಳಿ ದಾವೆ ಸಲ್ಲಿಸಿರುತ್ತಾರೆ. ನನ್ನ ಮುತ್ತಾತನ ಹೆಸರು ಸಿದ್ದಯ್ಯ ಅವರ ತಂದೆ ಹೆಸರು ಕರಿಯಯ್ಯ. ಸದರಿ ಕರಿಯಯ್ಯ ಅವರಿಗೆ ಸಿದ್ದಯ್ಯ ಹಾಗೂ ತಿಮ್ಮಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಅವರಿಗೆ ಸಿದ್ದಯ್ಯ ಒಬ್ಬರೆ ಮಗ. ಸದರಿ ಕರಿಯಯ್ಯ ಅವರಿಗೆ ಸಿದ್ದಯ್ಯ ಒಬ್ಬರೆ ಮಗ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸಿದ್ದಯ್ಯ ಹಾಗೂ ತಿಮ್ಮಯ್ಯ ಅವರು 60 ವರ್ಷಗಳ ಹಿಂದೆ ಪೌತಿಯಾಗಿದ್ದಾರೆ ಎಂದರೆ ಸರಿಯಲ್ಲ.

**6.** ಸದರಿ ಸಿದ್ದಯ್ಯನವರಿಗೆ **4** ಜನ ಗಂಡು ಮಕ್ಕಳು ಎಂದರೆ ಸುಳ್ಳು. ತಿಮ್ಮಯ್ಯ ಅವರಿಗೆ ಕಿವುಡಯ್ಯ ಎಂಬ ಒಬ್ಬನೆ ಮಗ ಎಂದರೆ ಸುಳ್ಳು. ನನ್ನ ತಾತನ ಹೆಸರು ಸಣ್ಣತಮ್ಮಯ್ಯ. ನನ್ನ ತಾತನಿಗೆ **1.** ಸಣ್ಣತಿಮ್ಮಯ್ಯ **2.** ಕುನ್ನಯ್ಯ **3.**ಪುಟ್ಟರಾಜಯ್ಯ **4.** ಸ್ವಾಮಯ್ಯ ಎಂಬ **4** ಜನ ಗಂಡು ಮಕ್ಕಳು ಎಂದರೆ ಸರಿಯಲ್ಲ. **5** ಜನ ಗಂಡು ಮಕ್ಕಳು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಸಿದ್ದಯ್ಯನಿಗೆ **3** ಹೆಣ್ಣು ಮಕ್ಕಳು.**1.**ಪುಟ್ಟಸಿದ್ದಮ್ಮ **2.**ಮರಿಸಿದ್ದಮ್ಮ **3.**ಸಣ್ಣಜಮ್ಮ ಅವರುಗಳ ಪೈಕಿ ಇಬ್ಬರು ಪೌತಿಯಾಗಿದ್ದು, ಪುಟ್ಟಸಿದ್ದಮ್ಮ ಮಾತ್ರ ಬದುಕಿದ್ದಾರೆ.

**7.** ನನ್ನ ತಾತ ಸಣ್ಣತಮ್ಮಯ್ಯ ಹಾಗೂ ನನ್ನ ಚಿಕ್ಕ ತಾತ ಕುನ್ನಯ್ಯ ಹಾಗೂ ಪುಟ್ಟರಾಜಯ್ಯ ಪೌತಿಯಾಗಿದ್ದಾರೆ ಎಂದರೆ ಸರಿ. ತಿಮ್ಮಯ್ಯನ ಮಗ ಕಿವುಡಯ್ಯ ಸಹ ಪೌತಿಯಾಗಿದ್ದಾರೆ ಎಂದರೆ ಸರಿ. ಕಿವುಡಯ್ಯ ಪೌತಿಯಾಗಿದ್ದಾರೆ ಎಂದರೆ ಸರಿ. ಆದರೆ ಕಿವುಡಯ್ಯ ತಿಮ್ಮಯ್ಯನ ಮಗ ಅಲ್ಲ. ನನ್ನ ಮುತ್ತಾತ ಸಿದ್ದಯ್ಯ ಅವರಿಗೆ **5** ಜನ ಮಕ್ಕಳು ಎಂದು ತೋರಿಸಲು ಆರ್ ಡಿ ವಂಶವೃಕ್ಷ ಹಾಜರುಪಡಿಸಿಲ್ಲ. ಹಾಜರುಪಡಿಸಲು ತೊಂದರೆ ಇಲ್ಲ.

**8.** ಪ್ರಸ್ತುತ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ. ನನ್ನ ತಂದೆ ಹಾಗೂ ಅಜ್ಜಿ ಬಳಿ ಕೇಳಿ ನಾನೇ ಸದರಿ ಪ್ರತಿವಾದ ಪತ್ರವನ್ನು ವಕೀಲರ ಮೂಲಕ ಸಲ್ಲಿಸಿರುತ್ತೇನೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ಈಗಾಗಲೇ ಭಾಗಾಂಶ ಆಗಿದ್ದು, ಅವರವರ ಹಿಸ್ಸೆ ನೀಡಲಾಗಿದೆ, ಈಗ ಕೇಳಿರುವ ಭಾಗಾಂಶ ಸುಳ್ಳು ಎಂದು ಬರೆಯಿಸಿ ಹಾಕಿರುತ್ತೇನೆ. 1981-82 ರಲ್ಲಿ ಭಾಗಾಂಶ ಆಗಿರುತ್ತದೆ. ಸದರಿ ಭಾಗಾಂಶವನ್ನು ಮೌಖಿಕವಾಗಿ ಮಾಡಿಕೊಂಡು ನಂತರ ಬರವಣಿಗೆಯಲ್ಲಿ ತೆಗೆದುಕೊಂಡಿದ್ದಾರೆ. ಆ ಮೇಲೆ ಆರ್.ಟಿ.ಸಿಯಲ್ಲಿ ನಮೂದಾಗಿದೆ ಎಂದು ಸಾಕ್ಷಿ ನುಡಿಯುತ್ತಾರೆ.

9. 1981-82 ರಲ್ಲಿ ಬರವಣಿಗೆ ಆಗಿರುತ್ತದೆ. ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಸದರಿ ಬರವಣಿಗೆ ಆಗುವ ಸಮಯ ನೀವು ಖುದ್ದಾಗಿ ಇದ್ದಾರ ಎಂಬ ಪ್ರಶ್ನೆಗೆ ಆಗ ನಾನು ಹುಟ್ಟಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಭಾಗಾಂಶ ಪತ್ರ ಯಾರ ಬಳಿ ಇದೆ ನನಗೆ ಗೊತ್ತಿಲ್ಲ. ಪಹಣಿ ಪತ್ರಿಕೆ ಗಳಲ್ಲಿ ವಿಭಾಗ ಎಂದು ತೋರಿಸಿಲ್ಲ, ಕೇವಲ ಖಾತೆ ಬದಲಾವಣೆ ಎಂದು ತೋರಿಸಲಾಗಿದೆ. ಯಾವ ಆಧಾರದ ಮೇಲೆ ಖಾತೆ ಆಗಿರುತ್ತದೆ ನನಗೆ ಗೊತ್ತಿಲ್ಲ.

**10.** ನಿಡಿ.**2** ರಿಂದ **6** ಪಹಣಿ ಪತ್ರಿಕೆಗಳ ಪ್ರಕಾರ ಪೌತಿ ಖಾತೆ ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ. ನಿಡಿ.**2** ರಿಂದ **6** ಪಹಣಿ ಪತ್ರಿಕೆಗಳಲ್ಲಿ ವಿಭಾಗದ ಮೂಲಕ ಖಾತೆ ಬದಲಾವಣೆ ಆಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿ.

**11.** ನನ್ನ ತಾತನ ಹಿಸ್ಸೆಗೆ ಬಂದ ಎಲ್ಲಾ ಜಮೀನುಗಳ ಚೆಕ್ಕು ಬಂದಿ ಗೊತ್ತಿದೆ. ವಾದಿಗಳ ಹಿಸ್ಸೆಗೆ ನೀಡಿದ ಜಮೀನುಗಳ ಚೆಕ್ಕುಬಂದಿ ಗೊತ್ತಿದೆ. ದಾವಾ ಆಸ್ತಿಗಳಲ್ಲಿ ವಾದಿಯರ ತಾತನಿಗೆ ಹಾಗೂ ನಮ್ಮ ತಾತನಿಗೆ ಅರ್ಧ ಹಿಸ್ಸೆ ಬರಬೇಕು ಎಂದರೆ ಸುಳ್ಳು.

**12.** ವಾದಿ ಸಣ್ಣಮ್ಮ ಅವರ ಗಂಡ ಅವರ ಮಗ **2** ನೇ ವಾದಿ ಮಹದೇವ **4** ವರ್ಷ ಇದ್ದಾಗಲೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಸದರಿ ಕಿವುಡಯ್ಯ ತೀರಿಹೋದಾಗ ಅವರ **2** ರಿಂದ **4** ನೇ ವಾದಿಗಳು ಚಿಕ್ಕವರು ಎಂದರೆ ಸರಿ. ಆ ಸಮಯದಲ್ಲಿ **1** ನೇ ವಾದಿಗೆ ಯಾವುದೇ ವ್ಯವಹಾರ ಜ್ಞಾನ ಇಲ್ಲದೆ ಇದ್ದರಿಂದ **1** ನೇ ವಾದಿಯ ಗಂಡನ ಹಿಸ್ಸೆಗೆ ಬಂದ ಜಮೀನುಗಳನ್ನು ನನ್ನ ತಾತ ಸಣ್ಣತಮ್ಮಯ್ಯ ಅವರೆ

ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 2 ನೇ ವಾದಿ ವಯಸ್ಕನಾದ ನಂತರ ತನ್ನ ತಂದೆಯ ಹಿಸ್ಸೆಗೆ ಬಂದ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ, 1981-82 ರಿಂದಲೇ ಅವರು ತಮ್ಮ ಹಿಸ್ಸೆಗೆ ಬಂದ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

13. ಸಿದ್ದಯ್ಯ ಹಾಗೂ ತಿಮ್ಮಯ್ಯ ಮೌಖಿಕವಾಗಿ ವಿಭಾಗಾಂಶ ಮಾಡಿಕೊಂಡಿದ್ದರಿಂದ ಅವರು ಅವಿದ್ಯಾವಂತರಾದ್ದರಿಂದ ತಿಮ್ಮಯ್ಯ ಅವರು ಅದನ್ನು ಖಾತೆ ಮಾಡಿಸಿಕೊಂಡಿರಲಿಲ್ಲ ಎಂದರೆ ಸುಳ್ಳು. ವಾದಿಯರು ಅ ಸಮಯ ನನ್ನ ತಾತ ಸಣ್ಣ ತಮ್ಮಯ್ಯ 1 ನೇ ವಾದಿಯ ಗಂಡನ ಹಿಸ್ಸೆಗೆ ಬಂದ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರಿಂದ ನನ್ನ ತಾತ ಸದರಿ ಎಲ್ಲಾ ಆಸ್ತಿಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು. ನಂತರ ನನ್ನ ತಾತ ವಾದಿಯರಿಗೆ ಹಿಸ್ಸೆ ಕೊಟ್ಟ ಹಾಗೆ ಮಾಡಿ ಎಲ್ಲಾ ಜಮೀನುಗಳನ್ನು ಜಂಟಿ ಖಾತೆಯಲ್ಲಿ ಇಟ್ಟಿರುತ್ತಾರೆ ಎಂದರೆ ಸುಳ್ಳು. ವಾದಿಯರಿಗೆ ದಾವಾ ಆಸ್ತಿಗಳಲ್ಲಿರುವ ಅರ್ಧ ಹಿಸ್ಸೆಯನ್ನು ಪಡೆದುಕೊಳ್ಳುವ ತಿಮ್ಮಯ್ಯ ಸಿದ್ದಯ್ಯನ ಸಹೋದರ ಅಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿ ಗಂಡ ಕಿವುಡಯ್ಯ ತಿಮ್ಮಯ್ಯ ಅವರ ಮಗ ಆಗಿದ್ದರು ಸಹ ಅವರು ಸಿದ್ದಯ್ಯನ ಮಗ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಅರ್ಧ ಭಾಗಾಂಶದ ಹಿಸ್ಸೆ ಇದೆ ಎಂದರೆ ಸುಳ್ಳು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.